· ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

21ನೇ ಮಹಡಿ, ವಿ.ವಿ. ದೊಡ್ಡಗೋಪುರ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01
ಕಛೇರಿ : 080-2286 4212 ಫ್ಯಾಕ್ಸ್ : 080-2286 5958
ವೆಬ್‌ಸೈಟ್ : https//:gokdom.kar.nic.in
ಇ-ಮೇಲ್ : directorgokdom@gmail.com

**ಸಂಖ್ಯೆ:ಅಸಂನಿ:ಸಭ:ಸುತ್ತೋಲೆ:ಸಿಆರ್-02:2018-19** **ದಿ:12.06.2018**

# ಸುತ್ತೋಲೆ-2

**ವಿಷಯ:-** ಅಲ್ಪಸಂಖ್ಯಾತರ ಸಮುದಾಯದ ಸಮುದಾಯಭವನ ಕಟ್ಟಡಗಳ ಕುರಿತು.

******

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಭೌದ್ಧರು ಮತ್ತು ಸಿಖ್ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಗಾಗಿ ಸದರಿ ಜನಾಂಗದ ಅನುಕೂಲಕ್ಕಾಗಿ **ಸಮುದಾಯಭವನ:ಶಾದಿಮಹಲ್‌ಗಳನ್ನು** ನಿರ್ಮಿಸಲು ಅನುದಾನ ಬಿಡುಗಡೆ ಮಾಡಲು ಸರ್ಕಾರಿ ಆದೇಶ ಸಂಖ್ಯೆ: ಸಕಇ 245 ಬಿಎಂಎಸ್ 2000, ದಿ:05.10.2000ರಲ್ಲಿ ಆದೇಶ ಹೊರಡಿಸಲಾಗಿದೆ. ತದನಂತರ ಅನುದಾನ ಪರಿಷ್ಕೃತಗೊಳಸುತ್ತಾ ಆದೇಶಗಳನ್ನು ಕಾಲಕಾಲಕ್ಕೆ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಹೀಗೆ ಅಲ್ಪಸಂಖ್ಯಾತರ ಇಲಾಖೆಯಿಂದ ಅನುದಾನ ಪಡೆದು ನಿರ್ಮಿಸುವ ಸಮುದಾಯಭವನ ಕಟ್ಟಡಗಳಲ್ಲಿ ಇಲಾಖೆಯ ಹೆಸರನ್ನು ನಮೂದಿಸದಿರುವುದು, ಕಟ್ಟಡ ಬಾಡಿಗೆಯನ್ನು ಮನಸೋಇಚ್ಚೆ ನಿಗಧಿಪಡಿಸುತ್ತಿರುವ ಬಗ್ಗೆ ಮಾಹಿತಿ ತಿಳದು ಬಂದಿದೆ. ಆದುದರಿಂದ, ಅಲ್ಪಸಂಖ್ಯಾತರ ಇಲಾಖೆಯಿಂದ ಅನುದಾನ ಪಡೆದು ನಿರ್ಮಿಸುವ/ನಿರ್ಮಿಸಿರುವ ಎಲ್ಲಾ ಸಮುದಾಯಭವನ/ ಶಾದಿಮಹಲ್ ಕಟ್ಟಡ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ತಿಳಸಿದೆ ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಇಲಾಖೆಗೆ ತಪ್ಪದೇ ಮಾಹಿತಿಯನ್ನು ನೀಡುವುದು.

- ಸರ್ಕಾರದ ಪತ್ರ ಸಂಖ್ಯೆ: ಎಂಡಬ್ಲುಡಿ 222 ಎಂಡಿಎಸ್ 2018, ದಿ: 12.04.2018 ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಮುಸ್ಲಿಂ ಸಮುದಾಯದಿಂದ ನಿರ್ಮಿಸಲಾಗುತ್ತಿರುವ ಶಾದಿಮಹಲ್ ಕಟ್ಟಡಗಳಗೂ ಸಹ "ಶಾದಿಮಹಲ್" ಎಂಬುದರ ಬದಲಾಗಿ "ಸಮುದಾಯಭವನ" ಎಂದು ಬದಲಾವಣೆ ಮಾಡಲಾಗಿದೆ. ಅದರಂತೆ, ನಿರ್ದೇಶನಾಲಯದಿಂದ ಸುತ್ತೋಲೆ ಹೊರಡಿಸಲಾಗಿದೆ.

- ಅದರಂತೆ, ಈಗಾಗಲೇ ಇಲಾಖೆಯಿಂದ ಅನುದಾನ ಪಡೆದು ನಿರ್ಮಿಸಿರುವ ಎಲ್ಲಾ ಶಾದಿಮಹಲ್ ಕಟ್ಟಡ ಮುಂದೆ "ಶಾದಿಮಹಲ್" ಎಂಬುದರ ಬದಲಾಗಿ "ಸಮುದಾಯಭವನ" ಎಂದು ಕಡ್ಡಾಯವಾಗಿ ನಮೂದಿಸುವುದು ಮತ್ತು ನಾಮಫಲಕಗಳನ್ನು ಅಳವಡಿಸುವುದು.
- ಇನ್ನು ಮುಂದೆ ಪತ್ರ ವ್ಯವಹಾರವು ಸಹ ಸಮುದಾಯಭವನ ಎಂದು ನಡೆಸುವುದು.
- ಸಮುದಾಯಭವನ ಕಟ್ಟಡದ ಮುಂಭಾಗದ ಫಲಕದಲ್ಲಿ ಕಡ್ಡಾಯವಾಗಿ ಈ ಕೆಳಕಂಡ ಅಂಶಗಳನ್ನು ನಮೂದಿಸತಕ್ಕದ್ದು
  - ಇಲಾಖೆಯ ಹೆಸರು
  - ಇಲಾಖೆಯಿಂದ ಪಡೆದ ಅನುದಾನದ ವಿವರ
  - ಸಂಸ್ಥೆಯ ವತಿಯಿಂದ ಭರಿಸಿರುವ ಅನುದಾನ
  - ಕಟ್ಟಡದ ಅಂದಾಜು ವೆಚ್ಚ
  - ಕಟ್ಟಡ ಪೂರ್ಣಗೊಂಡ ದಿನಾಂಕ
- ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು (ಬಾಡಿಗೆ ನಿಯಂತ್ರಣ ಸಮಿತಿ) ನಿಗಧಿಪಡಿಸಿ ಅಲ್ಪಸಂಖ್ಯಾತರ ಇಲಾಖೆಯಿಂದ ಅನುದಾನ ಪಡೆದು ನಿರ್ಮಿಸುವ/ ನಿರ್ಮಿಸಿರುವ ಎಲ್ಲಾ ಸಮುದಾಯಭವನ ಕಟ್ಟಡಗಳಿಗೆ ಬಾಡಿಗೆಯನ್ನು ನಿಗಧಿಪಡಿಸುವುದು.
- ಪಾರದರ್ಶಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಂಸ್ಥೆಯವರು ಬಾಡಿಗೆ ದರವನ್ನು ಪ್ರಕಟಿಸುವುದು ಆನ್‌ಲೈನ್ ಮೂಲಕ ಮುಂಗಡ ಕಾಯ್ದಿರಿಸುವಂತೆ ವ್ಯವಸ್ಥೆ ಮಾಡುವುದು.
- ಸದರಿ ಆನ್‌ಲೈನ್ ವ್ಯವಸ್ಥೆಯನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವೆಬ್‌ಸೈಟ್ ಗೆ ಲಿಂಕ್ ಮಾಡಿಕೊಳ್ಳುವುದು.
- ಸಂಸ್ಥೆಯವರ ಕಮಿಟಿಯಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳು ಸಹ ಕಡ್ಡಾಯವಾಗಿ ಸದಸ್ಯರಿರತಕ್ಕದ್ದು. ನಿಯತಕಾಲಿಕ ಸಭೆ ನಡೆಸುವುದು & ಆಡಿಟ್ ಪದ್ಧತಿ ಜಾರಿಗೆ ತರುವುದು.

- ಜಿಲ್ಲೆಯ ಇಲಾಖಾ ವೆಬ್‌ಸೈಟ್‌ನಲ್ಲಿ ಸಮುದಾಯಭವನ ಕಟ್ಟಡದ ಛಾಯಾ ಚಿತ್ರ ಹಾಗೂ ಅದರ ಬಾಡಿಗೆ ನಿಗಧಿಯಾಗಿರುವ ಮೊತ್ತವನ್ನು ಪ್ರಕಟಿಸುವುದು.
- ಸಂಸ್ಥೆಯವರು ಮೇಲ್ಕಂಡಂತೆ ಕ್ರಮ ಕೈಗೊಳ್ಳದೇ ಇದ್ದಲ್ಲಿ ಸಮುದಾಯಭವನವನ್ನು ಸರ್ಕಾರದ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳುವುದು.

12/6

**(ಅಕ್ರಂ ಪಾಷ , ಐ.ಎ.ಎಸ್)**
**ನಿರ್ದೇಶಕರು,**
**ಅಲ್ಪಸಂಖ್ಯಾತರ ನಿರ್ದೇಶನಾಲಯ**
**ಬೆಂಗಳೂರು.**

**<u>ಪ್ರತಿಯನ್ನು ಮಾಹಿತಿಗಾಗಿ:-</u>**

1) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
2) ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ

**<u>ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ</u>**

3) ರಾಜ್ಯದ ಎಲ್ಲಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ
4) ಎಲ್ಲಾ ಸಮುದಾಯಭವನ ಸಂಸ್ಥೆಯವರಿಗೆ
5) ಕಛೇರಿ ಪ್ರತಿ/ಇಲಾಖಾ ವೆಬ್‌ಸೈಟ್‌ಗೆ
6) ಹೆಚ್ಚುವರಿ ಪ್ರತಿ